# ಜಾನುವಾರು ಬೆಳ್ಳಕ್ಕಿಯ ಜಾಲಿ ಸವಾರಿ

ಪಕ್ಷಿ ಪ್ರಾಣಿಗಳಲ್ಲಿ ಪರಸ್ಪರ ಅನುಕೂಲವಾಗುವಂತಹ ಸಹಜೀವನದ ಹಲವಾರು ಉದಾಹರಣೆಗಳಿವೆ. ಜಾನುವಾರುಗಳ ಬೆನ್ನೇರಿ ಸವಾರಿ ಮಾಡುತ್ತಾ, ಅವು ಮೇಯುವ ಜಾಗದಲ್ಲಿ ಸಿಗುವ ಹುಳ ಹುಪ್ಪಟೆಗಳನ್ನು ತಿನ್ನುವ 'ಕ್ಯಾಟಲ್ ಇಗ್ರೆಟ್' ಅರ್ಥಾತ್ 'ಜಾನುವಾರು ಬೆಳ್ಳಕ್ಕಿ'ಯ ದರ್ಶನ ಇತ್ತೀಚೆಗೆ ನಮ್ಮ ಮನೆಯ ಮುಂದೆಯೇ ಆಯಿತು. ಹುಲ್ಲು ಮೇಯುತ್ತಿದ್ದ ಹಸುವೊಂದರ ಮೇಲೆ ಜಾಲಿಯಾಗಿ ಸವಾರಿ ಮಾಡುತ್ತಾ, ಈ ಸುಂದರ ಹಕ್ಕಿ, ಫೋಟೊಗೆ ಪೋಸ್ ಕೊಟ್ಟಿತು. ವೈಜ್ಞಾನಿಕವಾಗಿ 'ಬುಲ್ ಬುಲ್ ಕಸ್ ಐಬಿಸ್' ಎಂದು ಕರೆಯುವ ಹಾಗೂ ಕೊಕ್ಕರೆಯನ್ನು ಹೋಲುವ ಬಿಳಿ ಬಣ್ಣದ ಈ ಹಕ್ಕಿ, ಕೆರೆ ಜೌಗುಗಳಲ್ಲಿ ಕಪ್ಪೆ ಏಡಿ ಸಣ್ಣ ಮೀನುಗಳು ಸೀಗಡಿ ಮುಂತಾದವುಗಳ ಬೇಟೆಯಾಡುತ್ತದೆ. ಜೊತೆಗೆ ಇದರ ಪರಮ ಮಿತ್ರರಾದ ಜಾನುವಾರುಗಳ ಜೊತೆಗೆ ಓಡಾಡುತ್ತಾ, ಮೇಯುವಾಗ ಅವು ಹುಲ್ಲು ಕೆದಕಿದ ಜಾಗದಲ್ಲಿ ಸಿಗುವ ಕೀಟಗಳನ್ನು ತಿನ್ನುತ್ತವೆ. ಜೊತೆಗೆ ಜಾನುವಾರುಗಳ ಬೆನ್ನೇರಿ ಕುಳಿತು, ಅವುಗಳ ಮೈಯಲ್ಲಿರುವ ನೊಣ, ಹೇನುಗಳನ್ನೂ ಇವು ಭಕ್ಷಿಸುತ್ತವೆ. ತಮಗೆ ಕಾಟ ಕೊಡುವ ಹೇನುಗಳನ್ನು ಇವು ತಿನ್ನುವುದರಿಂದ, ಹಸು ಎಮ್ಮೆಗಳಿಗೆ ಇವು ಬೆನ್ನೇರಿ ಕುಳಿತರೆ ಒಂದು ರೀತಿಯ ಖುಷಿ. ಹಾಗಾಗಿಯೇ ಈ ಪ್ರಾಣಿ ಪಕ್ಷಿಗಳ ನಡುವೆ ಒಂದು ಬಗೆಯ ಪರಸ್ಪರ ಅನುಕೂಲದ, ಸ್ನೇಹದ ಸಹಜೀವನ.

—ಎಚ್.ಎಸ್. ನವೀನ ಕುಮಾರ್, ಹೊಸದುರ್ಗ







# ರುದ್ರಾಕ್ಷಿ ಹಣ್ಣು ಕಂಡಿರಾ?

ಕಡು ನೀಲಿ ವರ್ಣದ ಸಿಪ್ಪೆಯಿರುವ ಇದು ರುದ್ರಾಕ್ಷಿ ಹಣ್ಣು. ಶಿವನ ನೇತ್ರವೆಂದೇ ಹೇಳುವ ಶಿವಭಕ್ತರು ರುದ್ರಾಕ್ಷಿಯ ಹಾರಗಳನ್ನು ಕೊರಳಿಗೆ ಧರಿಸುತ್ತಾರೆ. ಹಿಮಾಲಯ ಭಾಗದಲ್ಲಿ ಯಥೇಚ್ಛವಾಗಿ ಬೆಳೆಯುವ ರುದ್ರಾಕ್ಷಿ ಮರಗಳನ್ನು ಈಗ ಕರ್ನಾಟಕದ ಕರಾವಳಿ ಭಾಗದಲ್ಲೂ ಕಾಣಬಹುದು. ಎಲಿಯೋ ಕಾರ್ಪಸ್ ಗ್ಯಾನಿಟ್ರಸ್ ಕುಟುಂಬಕ್ಕೆ ಸೇರಿದ ರುದ್ರಾಕ್ಷಿ ಮರ ನಾಲ್ಕು ವರ್ಷಗಳಲ್ಲಿ ಕಾಯಿ ಕೊಡುತ್ತದೆ. ಸಿಪ್ಪೆಯನ್ನು ಒಡೆದರೆ ಒಳಗೆ ಹಾರ ತಯಾರಿಸಲು ಯೋಗ್ಯವಾದ ಕಾಯಿ ಸಿಗುತ್ತದೆ. ರುದ್ರಾಕ್ಷಿ ಹಣ್ಣು ತಿನ್ನಲು ಯೋಗ್ಯವಲ್ಲ ಎನ್ನುತ್ತಾರೆ ಇದನ್ನು ಬೆಳೆದಿರುವ ವರ್ಮುಡಿ ಶಿವಪ್ರಸಾದರು.

—ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ



